
ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೩೪ | ಮೇ ೨೦೧೫ | ಸಂಚಿಕೆ ೪




"ಆಲಿಸುವ ಕಲೆ ಸುಲಭವಲ್ಲ. ಆದರೆ ಆಲಿಸುವ ಕಲೆಯಿಂದ ಅಪಾರವಾದ ಚೆಲುವು, ಅಪಾರವಾದ ಅರಿವು ದೊರೆಯುತ್ತವೆ. ನಾವು ನಮ್ಮೊಳಗೆ ಬೇರೆ ಬೇರೆ ಆಳಗಳಲ್ಲಿ ನಿಂತು ಕೇಳಿಸಿಕೊಳ್ಳುತ್ತೇವೆ. ಆದರೆ ಕೇಳಿಸಿಕೊಳ್ಳುವಾಗ ನಮ್ಮ ಮನಸ್ಸಿನಲ್ಲಿ ಆಗಲೇ ರೂಪುಗೊಂಡ ಯಾವುದೋ ಕಲ್ಪನೆ, ಯಾವುದೋ ದೃಷ್ಟಿಕೋನ ಸಿದ್ಧಮಾಡಿ ಇಟ್ಟುಕೊಂಡಿರುತ್ತೇವೆ."

ಜೆ ಕೃಷ್ಣಮೂರ್ತಿ

ಜನನ: ಮೇ 11, 1895.

# 'ನಿಮ್ಮ ಊರುಗೋಲಾಗಲಾರೆ'

ಈ ವರ್ಷ ಶಿಬಿರಕ್ಕೆ ಮೊದಲು ಓಹ್ಯೈನಲ್ಲಿ ಆರು ವಾರಗಳ ಕಾಲ ಕೆ ತಂಗಿದ್ದರು. ಆಗ ಅವರ ತಲೆ ಹಾಗೂ ಬೆನ್ನಿನಲ್ಲಿ ವಿಪರೀತ ಯಾತನೆ ಕಂಡುಬರುತ್ತಿತ್ತು. ಅವರಿಗೆ ವಿಪರೀತ ಆಯಾಸವಾಗುತ್ತಿತ್ತು. ಹೆಚ್ಚಿನ ವಿಶ್ರಾಂತಿ ಪಡೆಯದಿದ್ದರೆ ಪದೇ ಪದೇ ಕಾಡುವ ಶ್ವಾಸಕೋಶದ ಸಮಸ್ಯೆ ಕ್ಷಯರೋಗವಾಗಿ ಮಾರ್ಪಡಬಹುದು ಎಂದು ಓರ್ವ ಹೊಸ ವೈದ್ಯರು ಕೆ ಗೆ ಎಚ್ಚರಿಕೆ ನೀಡಿದರು. ಲಂಡನ್‌ನ ಕ್ವೀನ್ಸ್ ಹಾಲ್‌ನಲ್ಲಿ ನಡೆಯಬೇಕಿದ್ದ ಮೂರು ಉಪನ್ಯಾಸಗಳೂ ಸೇರಿದಂತೆ ಆ ಬೇಸಿಗೆಯಲ್ಲಿ ನಡೆಯಲಿದ್ದ ಎಲ್ಲ ಉಪನ್ಯಾಸ ಕಾರ್ಯಕ್ರಮಗಳನ್ನು 'ಕೆ' ರದ್ದು ಮಾಡಿದರು. ಓಹ್ಯೈ, ಒಮ್ಮನ್ ಹಾಗೂ ಇಯದ ಶಿಬಿರ, ಸಮಾವೇಶಗಳಲ್ಲಿ ಮಾತ್ರ ಪಾಲ್ಗೊಳ್ಳುವುದು ಎಂದು ತೀರ್ಮಾನಿಸಿದರು.



ತೋಪಿನಲ್ಲಿ ಏರ್ಪಟ್ಟ ಒಂದು ಭಾಷಣದಲ್ಲಿ ಅವರು ಹೀಗೆ ಘೋಷಿಸಿದರು: 'ನಾನೀಗ ಹೇಳುತ್ತಿದ್ದೇನೆ, ಯಾವುದೇ ಕಪಟವಿಲ್ಲದೆ ಹೇಳುತ್ತಿದ್ದೇನೆ, ಸರಿಯಾದ ತಿಳಿವಳಿಕೆಯಿಂದ ಹೇಳುತ್ತಿದ್ದೇನೆ, ಮನಸ್ಸಿನ ಹಾಗೂ ಹೃದಯದ ಪೂರ್ಣತೆಯೊಂದಿಗೆ ಹೇಳುತ್ತಿದ್ದೇನೆ; ಎಲ್ಲ ಮಾನವರೂ ವ್ಯಕ್ತಿಗಳೂ ಮತ್ತು ಅಖಂಡ ಪ್ರಪಂಚವೇ ಬಂದು ಸೇರಬೇಕಾದ ಆ ಜೀವನದ ಭವ್ಯತೆಯ ಆ ಪೂರ್ಣ ಜ್ವಾಲೆಯೇ ನಾನು. ಶಿಬಿರ ನಡೆಯುತ್ತಿದ್ದ ಸಮಯದಲ್ಲಿ ಆರ್ಡರ್ ಆಫ್ ದ ಸ್ಟಾರ್ ಅನ್ನು ಅವರು ವಿಸರ್ಜಿಸಲಿದ್ದಾರೆ ಎಂಬ ಸುದ್ದಿ ಹಬ್ಬಿತು. ಇದನ್ನು ಅವರು ಕೆಲವು ವಾರಗಳ ಬಳಿಕ ಮಾಡಿದರು.

ಒಮ್ಮನ್ ಶಿಬಿರದ ಮೊದಲ ಸಭೆ ಆಗಸ್ಟ್ ೩ ರಂದು ಶ್ರೀಮತಿ ಬೆಸಂಟ್‌ರ ಉಪಸ್ಥಿತಿಯಲ್ಲಿ ನೆರವೇರಿತು. ೩೦೦೦ಕ್ಕೂ ಅಧಿಕ ಸ್ಟಾರ್ ಸದಸ್ಯರು ಪಾಲ್ಗೊಂಡಿದ್ದರು. ಸಾವಿರಾರು ಡಚ್ ಪ್ರಜೆಗಳು ರೇಡಿಯೋದಲ್ಲಿ ಅವರ ಉಪನ್ಯಾಸ ಆಲಿಸಿದರು. ಅವರು ತಮ್ಮದೇ ಇತಿಹಾಸದಲ್ಲಿ ಒಂದು ಯುಗವನ್ನು ಮಗುಚಿದರು. ಅವರು ಹೇಳಿದ್ದರ ಕೆಲವು ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ:

"ಸತ್ಯವು ಹಾದಿಗಳಿಲ್ಲದ ನೆಲೆ, ನೀವು ಯಾವುದೇ ಹಾದಿಯಿಂದ, ಯಾವುದೇ ಧರ್ಮ ಅಥವಾ ಪಂಥದ ಮುಖೇನ ಅದನ್ನು ಮುಟ್ಟಲಾರಿರಿ. ಇದು ನನ್ನ ದೃಷ್ಟಿ. ನಾನು ಇದಕ್ಕೆ ಖಡಾಖಂಡಿತವಾಗಿ ಮತ್ತು ನಿಶ್ಶರ್ತವಾಗಿ ಬದ್ಧನಾಗಿದ್ದೇನೆ... ನೀವು ಅದನ್ನು ಮೊದಲು ಅರ್ಥಮಾಡಿಕೊಂಡರೆ ಒಂದು ನಂಬಿಕೆ ಅಥವಾ ಶ್ರದ್ಧೆಯನ್ನು ಸಂಘಟಿಸುವುದು ಎಷ್ಟು ಕಷ್ಟ ಎಂಬುದು ನಿಮಗೇ ತಿಳಿಯುತ್ತದೆ. ನಂಬಿಕೆ ಎಂಬುದು ಶುದ್ಧಾಂಗ ವೈಯಕ್ತಿಕ. ನೀವು ಅದನ್ನು

ಸಂಘಟಿಸಲಾರಿರಿ ಮತ್ತು ಸಂಘಟಿಸಕೂಡದು. ನೀವು ಹಾಗೆ ಮಾಡಿದ್ದಾದರೆ, ಅದು ಮೃತವಾಗುತ್ತದೆ; ಹರಳುಗಟ್ಟುತ್ತದೆ; ಅದು ಅನ್ಯರ ಮೇಲೆ ಹೇರಬಹುದಾದ ಒಂದು ಪಂಥ ಅಥವಾ ಧರ್ಮವಾಗುತ್ತದೆ.

ಇದನ್ನೇ ಜಗತ್ತಿನಾದ್ಯಂತ ಎಲ್ಲರೂ ಮಾಡುತ್ತಿರುವುದು. ಸತ್ಯವನ್ನು ಸಂಕುಚಿತ ಗೊಳಿಸಿ ಅದನ್ನು ಕ್ಷಣಿಕವಾಗಿ ಅತೃಪ್ತರಾದವರ ಮತ್ತು ದುರ್ಬಲರ ಪಾಲಿನ ಆಟಿಕೆಗಳನ್ನಾಗಿ ಮಾರ್ಪಡಿಸಲಾಗುತ್ತಿದೆ.

ಸತ್ಯವನ್ನು ಕೆಳಗಿಳಿಸಲು ಸಾಧ್ಯವಿಲ್ಲ. ವ್ಯಕ್ತಿ ಅದನ್ನು ಸಮೀಪಿಸಲು ಏರಬೇಕು. ಶಿಖರಾಗ್ರವನ್ನು ನೀವು ಕಣಿವೆಗೆ ತರಲಾರಿರಿ. ಆದುದರಿಂದ ಆರ್ಡರ್ ಆಫ್ ದ ಸ್ಟಾರ್ ಅನ್ನು ಏಕೆ ವಿಸರ್ಜಿಸಬೇಕು ಎಂಬುದಕ್ಕೆ ನನ್ನ ದೃಷ್ಟಿಯಲ್ಲಿ ಇದು ಮೊದಲ ಕಾರಣ. ಇದಕ್ಕೆ ಹೊರತಾಗಿ, ನೀವು ಪ್ರಾಯಃ ಬೇರೆ ಸಂಘಟನೆಗಳನ್ನು ಕಟ್ಟುವಿರಿ. ಸತ್ಯಾನ್ವೇಷಣೆಯ ಇತರ ಸಂಘಟನೆಗಳಿಗೆ ಸೇರಿ ಕೊಳ್ಳುವಿರಿ. ಆಧ್ಯಾತ್ಮಿಕ ಸ್ವರೂಪದ ಯಾವುದೇ ಸಂಘಟನೆಗೆ ನಾನು ಸೇರಲು ಬಯಸುವುದಿಲ್ಲ; ದಯಮಾಡಿ ಇದನ್ನು ಅರ್ಥಮಾಡಿಕೊಳ್ಳಿ....

ಈ ಉದ್ದೇಶಕ್ಕಾಗಿ ಒಂದು ಸಂಘಟನೆಯನ್ನು ಸ್ಥಾಪಿಸುವುದಾದರೆ ಅದು ಒಂದು ಊರುಗೋಲು, ದೌರ್ಬಲ್ಯ, ಬಂಧನ ಆಗುತ್ತದೆ. ಅದು ವ್ಯಕ್ತಿಯನ್ನು ಹೆಳವವಾಗಿಸುತ್ತದೆ. ಅವನ ಬೆಳವಣಿಗೆಯನ್ನು ತಡೆಯುತ್ತದೆ. ತನ್ನ ಅನನ್ಯತೆಯನ್ನು ಸ್ಥಾಪಿಸಿಕೊಳ್ಳಲು ಅಡ್ಡಿಯಾಗುತ್ತದೆ. ಆ ಆತ್ಯಂತಿಕವನ್ನು, ಅನನುಬಂಧಿತವಾದ ಸತ್ಯವನ್ನು ಸ್ವಯಂ ಶೋಧಿಸುವುದೇ ವ್ಯಕ್ತಿಯ ಅನನ್ಯತೆ. ಆದುದರಿಂದ ಆರ್ಡರ್‌ನ ಮುಖ್ಯಸ್ಥನಾಗಿ ಅದನ್ನು ವಿಸರ್ಜಿಸಲು ನಾನು ನಿರ್ಧಾರ ಮಾಡಿದ್ದು ಏಕೆ ಎಂಬುದಕ್ಕೆ ಇದು ಇನ್ನೊಂದು ಕಾರಣ.

ಇದೇನೂ ಘನವಾದ ಕಾರ್ಯವಲ್ಲ; ಏಕೆಂದರೆ ನನಗೆ ಅನುಯಾಯಿಗಳು ಬೇಕಾಗಿಲ್ಲ. ನಾನು ಏನು ಹೇಳುತ್ತಿದ್ದೇನೆ ಎಂಬುದರ ಅರ್ಥ ತಿಳಿದೇ ಹೇಳುತ್ತಿದ್ದೇನೆ. ನೀವು ಒಬ್ಬರ ಅನುಯಾಯಿಯಾದ ಗಳಿಗೆಯಿಂದ ಸತ್ಯವನ್ನು ಅನುಸರಿಸುವುದಿಲ್ಲ. ನಾನು ಹೇಳುತ್ತಿರುವುದಕ್ಕೆ ನೀವು ಗಮನ ಕೊಡುತ್ತೀರೋ ಇಲ್ಲವೋ ನನಗದು ಬೇಕಾಗಿಲ್ಲ. ಈ ಜಗತ್ತಿನಲ್ಲಿ ನಾನು ಏನನ್ನೋ ಮಾಡಬೇಕಾಗಿದೆ. ನಾನು ಅಚಲವಾದ ಏಕಾಗ್ರತೆಯಿಂದ ಅದನ್ನು ಮಾಡಿಯೇ ಸಿದ್ಧ. ನಾನು ಕೇವಲ ಒಂದೇ ಒಂದು ವಿಷಯದ ಬಗ್ಗೆ ಕಳಕಳಿಯುಳ್ಳವನಾಗಿದ್ದೇನೆ. ಮನುಷ್ಯನನ್ನು ಬಂಧಮುಕ್ತಗೊಳಿಸುವುದೇ ನನ್ನ ಗುರಿ. ಎಲ್ಲ ಪಂಜರಗಳಿಂದ, ಎಲ್ಲ ಭಯಗಳಿಂದ ಅವನನ್ನು ಬಂಧಮುಕ್ತ ಗೊಳಿಸಲು ಬಯಸುವೆ. ಧರ್ಮಗಳನ್ನು, ಪಂಥಗಳನ್ನು, ಹೊಸ ಸಿದ್ಧಾಂತಗಳನ್ನು ಹೊಸ ತತ್ವದರ್ಶನಗಳನ್ನು ಪ್ರತಿಷ್ಠಾಪಿಸುವ ಉದ್ದೇಶ ನನಗಿಲ್ಲ. ಹಾಗಿದ್ದರೆ ನೀವೇಕೆ ಸತತವಾಗಿ ಜಗತ್ ಪರ್ಯಟನೆ ಮಾಡಿ ಭಾಷಣ ಮಾಡುತ್ತೀರಿ ಎಂದು ಕೇಳುತ್ತೀರಿ. ನಾನು ಹೀಗೇಕೆ ಮಾಡುತ್ತಿದ್ದೇನೆ ಎಂದು

> ವ್ಯವಸ್ಥೆ ಎಂಬುದು ಧೀಶಕ್ತಿಯ ಉನ್ನತ ರೂಪ ಧೀಶಕ್ತಿ ಎಂದರೆ ಜಾಣ್ಮೆಯಲ್ಲ . ಅಭಿಪ್ರಾಯಗಳನ್ನು ತೀರ್ಮಾನಗಳನ್ನು ವಿರೋಧಿಸುವುದೆಂದಲ್ಲ; ಅದು ಕೇವಲ ತಾರ್ಕಿಕ ಸಾಮರ್ಥ್ಯವಲ್ಲ ಧೀಶಕ್ತಿ ಎಂಬುದು ತನ್ನ ಬಗ್ಗೆ ಹಾಗೂ ಅನ್ಯರ ಬಗ್ಗೆ ಅಂತರಂಗ ಬಹಿರಂಗಗಳೆರಡರಲ್ಲೂ ಕಂಡುಬರುವ ಸಂವೇದನಾಶೀಲತೆ.
>
> *ಜೆ ಕೃಷ್ಣಮೂರ್ತಿ*




ನಿಮಗೆ ಹೇಳುತ್ತೇನೆ. ನನಗೆ ಹಿಂಬಾಲಕರು ಬೇಡ, ವಿಶೇಷ ಗುಂಪು ಅಥವಾ ವಿಶೇಷ ಶಿಷ್ಯರು ಬೇಡ ಎಂಬ ಕಾರಣಕ್ಕಾಗಿಯಲ್ಲ. ನನಗೆ ಈ ಭೂಮಿಯ ಮೇಲೆ ಅಥವಾ ಆಧ್ಯಾತ್ಮಿಕ ಲೋಕದಲ್ಲಿ ಯಾರೂ ಶಿಷ್ಯರಿಲ್ಲ, ಧರ್ಮ ಪ್ರಚಾರಕ ದೂತರಿಲ್ಲ.

ಹಣದ ಆಮಿಷವೂ ಇಲ್ಲ, ಆಕರ್ಷಕವಾದ ಸುಖ ಜೀವನದ ಬಯಕೆಯೂ ಇಲ್ಲ. ಅಂಥ ಜೀವನ ಬೇಕೆಂದು ಬಯಸಿದ್ದರೆ ನಾನು ಇಂಥ ಒಂದು ಶಿಬಿರಕ್ಕಾಗಲಿ ಶೀತಪ್ರದೇಶದ ದೇಶಕ್ಕಾಗಲಿ ಬರುತ್ತಿರಲಿಲ್ಲ! ಇದೆಲ್ಲ ಒಂದು ಸಲ ಶಾಶ್ವತವಾಗಿ ಇತ್ಯರ್ಥವಾಗಬೇಕೆಂದು ನಾನು ಮುಕ್ತವಾಗಿ ಮಾತನಾಡುತ್ತಿದ್ದೇನೆ. ವರ್ಷೇ ವರ್ಷೇ ಈ ಬಾಲಿಶ ಚರ್ಚೆಗಳನ್ನು ಮಾಡುವುದು ನನಗಿಷ್ಟವಿಲ್ಲ.

ಸಾವಿರಾರು ಸದಸ್ಯರಿರುವ ಒಂದು ಸಂಘಟನೆಯನ್ನು ವಿಸರ್ಜಿಸುವುದು ಬಹಳ ಅದ್ಭುತವಾದ ಕೆಲಸವೆಂದು ನನ್ನನ್ನು ಸಂದರ್ಶನ ಮಾಡಿದ ಓರ್ವ ಪ್ರವೀಣ ವರದಿಗಾರರು ಹೇಳಿದರು. ಅವರ ಪಾಲಿಗೆ ಅದೊಂದು ಮಹತ್ ಕಾರ್ಯ, ಅವರು ಹೀಗೆ ಹೇಳಿದರು “ಹೀಗೆ ಮಾಡಿದ ಮೇಲೆ ನೀವೇನು ಮಾಡುವಿರಿ? ಹೇಗೆ ಬದುಕುವಿರಿ? ನಿಮ್ಮನ್ನು ಹಿಂಬಾಲಿಸುವವರು ಯಾರೂ ಇಲ್ಲ. ಯಾರೂ ನಿಮ್ಮ ಮಾತುಗಳನ್ನು ಆಲಿಸುವುದಿಲ್ಲ.” ನಿಜಕ್ಕೂ ಬದುಕುತ್ತಿರುವ, ಚಿರಂತನದ ಕಡೆಗೆ ಮೊಗ ಮಾಡಿದ ಐದೇ ಐದು ಜನರಿದ್ದರೂ ನನಗೆ ಸಾಕು. ಅರ್ಥಮಾಡಿಕೊಳ್ಳಲಾರದ, ಪೂರ್ವಾಗ್ರಹಗಳ ಲೇಪನದಲ್ಲಿ ಮುಳುಗಿರುವ ಹೊಸತೇನನ್ನೂ ಬಯಸದ, ನಿರ್ವೀರ್ಯರಾದ, ಕೊಳೆತ ಮನಸ್ಸುಗಳಿಗೆ ಹೊಸತನ್ನು ತರ್ಜುಮೆ ಮಾಡುವ ಸಾವಿರಾರು ಹಿಂಬಾಲಕರಿದ್ದೇನು ಫಲ?....

ಕಳೆದ ಹದಿನೆಂಟು ವರ್ಷಗಳಿಂದ ಈ ವಿದ್ಯಮಾನಕ್ಕಾಗಿ, ಲೋಕಗುರುವಿನ ಆಗಮನಕ್ಕಾಗಿ ನೀವು ಸಿದ್ಧರಾಗುತ್ತಿದ್ದೀರಿ. ಹದಿನೆಂಟು ವರ್ಷಗಳ ಕಾಲ ನೀವು ಸಂಘಟಿಸಿದ್ದೀರಿ, ನಿಮ್ಮ ಹೃನ್ಮನಗಳಿಗೆ ಹೊಸ ಆನಂದ ನೀಡಬಲ್ಲವನಿಗಾಗಿ, ನಿಮ್ಮ ಒಟ್ಟು ಬದುಕನ್ನು ಬದಲಿಸುವವನಿಗಾಗಿ, ನಿಮ್ಮಲ್ಲಿ ಹೊಸ ಅರಿವು ಮೂಡಿಸುವವನಿಗಾಗಿ ನೀವು ಕಾಯುತ್ತಿದ್ದೀರಿ. ನಿಮ್ಮನ್ನು ಬದುಕಿನ ಹೊಸ ಮಜಲಿಗೆ ಏರಿಸುವವನಿಗಾಗಿ ನೀವು ಕಾಯುತ್ತಿದ್ದೀರಿ. ಹೊಸ ಉತ್ತೇಜನ ನೀಡುವವನಿಗಾಗಿ ಕಾಯುತ್ತಿದ್ದೀರಿ. ನಿಮ್ಮನ್ನು ಬಿಡುಗಡೆಗೊಳಿಸುವವನಿಗಾಗಿ

ಕಾಯುತ್ತಿದ್ದೀರಿ. ಈಗ ನೋಡಿ ಏನಾಗುತ್ತಿದೆ ಎಂದು! ಪರಿಗಣಿಸಿರಿ, ನಿಮ್ಮಲ್ಲೇ ತರ್ಕಿಸಿರಿ, ಆ ನಂಬಿಕೆ ನಿಮ್ಮನ್ನು ಹೇಗೆ ವಿಭಿನ್ನ ಮಾಡಿದೆ ಎಂಬುದನ್ನು ಕಂಡುಕೊಳ್ಳಿ. ಅದು ಬಿಲ್ಲೆ ಧರಿಸುವ, ಮೇಲು ಮೇಲಿನ ವ್ಯತ್ಯಾಸವಲ್ಲ. ಅದು ಕ್ಷುಲ್ಲಕ; ಅಸಂಬದ್ಧ. ಯಾವ ರೀತಿಯಲ್ಲಿ ಅಂಥ ನಂಬಿಕೆ ಜೀವನದ ಅನಾವಶ್ಯಕ ವಾದ ಸಂಗತಿಗಳನ್ನು ಕೊಚ್ಚಿಕೊಂಡು ಹೋಗಿದೆ? ತೀರ್ಮಾನಿಸಲು, ಬೆಲೆಕಟ್ಟಲು ಇರುವುದು ಇದೊಂದೇ ಮಾರ್ಗ. ನೀವು ಯಾವ ರೀತಿಯಲ್ಲಿ ಮೊದಲಿಗಿಂತ ಹೆಚ್ಚು ಮುಕ್ತವಾಗಿದ್ದೀರಿ? ದೊಡ್ಡವರಾಗಿದ್ದೀರಿ? ಸುಳ್ಳಿನ ಮೇಲೆ ಮತ್ತು ಅನಾವಶ್ಯಕವಾದುದರ ಮೇಲೆ ನಿಂತಿರುವ ಪ್ರತಿಯೊಂದು ಧರ್ಮಕ್ಕೂ ನೀವು ಹೇಗೆ ಹೆಚ್ಚು ಅಪಾಯಕಾರಿ ಯಾಗಿದ್ದೀರಿ? ಯಾವ ರೀತಿಯಲ್ಲಿ ಈ ಸ್ಟಾರ್ ಸಂಘಟನೆಯ ಸದಸ್ಯರು ಭಿನ್ನವಾಗಿದ್ದಾರೆ?

ನೀವು ನಿಮ್ಮ ಆಧ್ಯಾತ್ಮಿಕ ಅನುಭವಕ್ಕಾಗಿ ಪರರನ್ನು ಅವಲಂಬಿಸಿದ್ದೀರಿ, ನಿಮ್ಮ ಸಂತೋಷಕ್ಕಾಗಿ ಯಾರನ್ನೋ ಆಧರಿಸಿದ್ದೀರಿ. ನಿಮ್ಮ ಬೋಧೆಗಾಗಿ ಅನ್ಯರನ್ನು ಆಶ್ರಯಿಸಿದ್ದೀರಿ.... ಬೋಧೆ, ವೈಭವ, ಪರಿಶುದ್ಧಿ ಸ್ವದ ನಿಷ್ಕಲಂಕ ಗುಣಕ್ಕಾಗಿ ನಿಮ್ಮೊಳಗನ್ನು ನೀವು ನೋಡಿಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ. ಆದರೆ ನಿಮ್ಮಲ್ಲಿ ಒಬ್ಬರೂ ಅದನ್ನು ಮಾಡಲು ಸಿದ್ಧರಿಲ್ಲ. ಕೆಲವೇ ಕೆಲವರು ಹೀಗೆ ಮಾಡಲು ಸಿದ್ಧರಿದ್ದರೆ, ಸಂಘಟನೆ ಯಾಕೆ ಬೇಕು?

> ಯಾವುದು ಅಗಣಿತವೋ ಅದನ್ನು ಶಬ್ದಗಳಿಂದ ಅಳೆಯಲಾಗದು. ನಾವು ಅಗಣಿತವೂ ಅಪ್ರಮೇಯವೂ ಆದುದನ್ನು ಯಾವತ್ತೂ ಶಬ್ದಗಳ ಚೌಕಟ್ಟಿನಲ್ಲಿ ಸೆರೆಹಿಡಿಯಲು ಯತ್ನಿಸುತ್ತೇವೆ; ಸಂಕೇತವೇ ಯಥಾರ್ಥವಲ್ಲ. ಆದರೆ ನಾವು ಸಂಕೇತವನ್ನು ಆರಾಧಿಸುತ್ತೇವೆ; ಹೀಗಾಗಿ ಸದಾ ಮಿತವಾದ ಸ್ಥಿತಿಯಲ್ಲೇ ಬದುಕುತ್ತೇವೆ.
>
> *ಜೆ ಕೃಷ್ಣಮೂರ್ತಿ*

ನೀವು ಅಕ್ಷರಗಳನ್ನು ಟೈಪಿಸಲು ಟೈಪ್ ರೈಟರ್ ಬಳಸುತ್ತೀರಿ. ಅದನ್ನು ನೀವು ಎತ್ತರದ ವೇದಿಕೆಯ ಮೇಲಿಟ್ಟು ಪೂಜಿಸುವುದಿಲ್ಲ ತಾನೆ? ಸಂಘಟನೆಯೇ ಮುಖ್ಯ ಕಾಳಜಿಯಾದಾಗ ನೀವು ಮಾಡುವುದು ಅದನ್ನೇ. ಅದರಲ್ಲಿ ಎಷ್ಟು ಜನ ಸದಸ್ಯರಿದ್ದಾರೆ! ಎಲ್ಲ ಪತ್ರಿಕೆಗಳ ವರದಿಗಾರರು ನನಗೆ ಕೇಳಿದ ಮೊದಲ ಪ್ರಶ್ನೆ ಇದು. ಎಷ್ಟು ಸದಸ್ಯರಿದ್ದಾರೋ ನನಗೆ ಗೊತ್ತಿಲ್ಲ. ನನಗೆ ಅದರ ಬಗ್ಗೆ ಕಾಳಜಿಯಿಲ್ಲ... ನೀವು ಎಷ್ಟು ದೂರ ಸಾಗಿ ಬಂದಿದ್ದೀರಿ, ನಿಮ್ಮ ಆಧ್ಯಾತ್ಮಿಕ ಸ್ಥಾನ ಏನು ಎಂದು ನಿಮ್ಮನ್ನು ಪ್ರಶ್ನಿಸುತ್ತಾರೆ. ಅದು ನಿಮಗೆ ಅಭ್ಯಾಸವಾಗಿದೆ. ಇದೆಷ್ಟು ಬಾಲಿಶ! ನೀವು ಭ್ರಷ್ಟರಾಗ ಲಾರಿರಿ ಎಂದು ನೀವಲ್ಲದೆ ಬೇರೆ ಯಾರು ತಾನೆ ಹೇಳಬಲ್ಲರು?

ಆದರೆ ನಿಜಕ್ಕೂ ಅರ್ಥಮಾಡಿಕೊಳ್ಳಲು ಬಯಸುವವರು, ಶಾಶ್ವತವಾದುದನ್ನು ಅರಸ ಬಯಸುವವರು, ಆದಿ ಅಂತ್ಯಗಳಿಲ್ಲದ ತೀವ್ರವಾದ ಭಾವತೀವ್ರತೆಯೊಂದಿಗೆ ಒಟ್ಟಿಗೆ ಮಾತನಾಡುತ್ತಾರೆ. ಅನಾವಶ್ಯಕವಾದುದೆಲ್ಲವಕ್ಕೆ, ಅವಾಸ್ತವಿಕತೆಗಳಿಗೆ ಹಾಗೂ ನೆರಳುಗಳಿಗೆ ಇಂಥವರು ಅಪಾಯಕಾರಿ.... ಅಂಥ ಸಮೂಹವನ್ನು ನಾವು ರೂಪಿಸ ಬೇಕು.

ಅದು ನನ್ನ ಗುರಿ. ಏಕೆಂದರೆ ಆ ನಿಜವಾದ ಸ್ನೇಹದಿಂದ, ನಮ್ಮೆಲ್ಲರ ನಡುವೆ ನಿಜವಾದ ಸಹಕಾರ ಒಡಮೂಡುತ್ತದೆ. ಆದರೆ ನಿಜವಾದ ಸ್ನೇಹ ಎಂದರೇನೆಂದು ನಿಮಗೆ ತಿಳಿದಿಲ್ಲವೆನಿಸುತ್ತದೆ. ಈ

ಸಹಕಾರ ಪ್ರಾಮಾಣ್ಯದಿಂದಲ್ಲ, ಮುಕ್ತಿಯಿಂದಲ್ಲ; ಬದಲಾಗಿ ನೀವು ನಿಜಕ್ಕೂ ಅರ್ಥ ಮಾಡಿಕೊಳ್ಳುವುದರಿಂದ ಮೂಡುತ್ತದೆ. ಆದುದರಿಂದಲೇ ನೀವು ಚಿರಂತನದಲ್ಲಿ ಬದುಕಬಲ್ಲಿರಿ. ಎಲ್ಲ ಸುಖಗಳಿಗಿಂತ ಎಲ್ಲ ತ್ಯಾಗಗಳಿಗಿಂತ ಮಿಗಿಲಾದುದು ಇದೇ.

ಎರಡು ವರ್ಷಗಳ ಕಾಲ ಸಾಕಷ್ಟು ಎಚ್ಚರದಿಂದ ಪರಿಶೀಲನೆ ಮಾಡಿದ ಮೇಲೆ ಈ ಕೆಲವು ಕಾರಣಗಳಿಗಾಗಿ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ.


ನಾನು ಆರ್ಡರ್ ಆಫ್ ದ ಸ್ಟಾರ್ ಅನ್ನು ವಿಸರ್ಜಿಸಲು ನಿರ್ಧರಿಸಿದ್ದೇನೆ. ನೀವು ಬೇರೆ ಸಂಘಟನೆಗಳನ್ನು ಮಾಡಿಕೊಂಡು ಬೇರೆಯವರನ್ನು ನೇತಾರರನ್ನಾಗಿ ನಿರೀಕ್ಷಿಸ ಬಹುದು. ನನಗೆ ಅದರ ಬಗ್ಗೆ ಕಾಳಜಿಯಿಲ್ಲ ಅಥವಾ ಹೊಸ ಪಂಜರಗಳ ಸೃಷ್ಟಿಯ ಬಗ್ಗೆ ಮತ್ತು ಆ ಪಂಜರಗಳನ್ನು ಹೊಸದಾಗಿ ಅಲಂಕರಿಸುವ ಬಗ್ಗೆ ನನಗೆ ಕಾಳಜಿಯಿಲ್ಲ. ಮನುಷ್ಯನನ್ನು ಆತ್ಯಂತಿಕವಾಗಿ, ನಿಶ್ಶರ್ತವಾಗಿ ಮುಕ್ತಗೊಳಿಸುವುದೇ ನನ್ನ ಏಕೈಕ ಕಾಳಜಿ."

*ಕೃತಿ:* ***"ಕೃಷ್ಣಮೂರ್ತಿ ಜೀವನ ಮರಣ"***
*ಅನುವಾದ: ಡಾ. ಮಹಾಬಲೇಶ್ವರ ರಾವ್*
*ಮೂಲ:* ***"The Life and Death of Krishnamurti***



## Retreat Schedule 2025

| | | |
|---|---|---|
| June | 12–15 | *Harmony in Relationships* |
| July | 10–13 | *What does it mean to be a 'Responsible Parent'?* |
| August | 7–10 | *breaking free from 'the Prison of the mind'* |




**Think On These Things**

**Price : 350**

ಪ್ಯಾರಾಬೋಲಾ ನಿಯತಕಾಲಿಕವು 'ಶತಮಾನದ ನೂರು ಅತ್ಯುತ್ತಮ ದಾರ್ಶನಿಕ ಕೃತಿಗಳಲ್ಲಿ ಒಂದಾಗಿದೆ' ಎಂದು ಆಯ್ಕೆ ಮಾಡಿದೆ. ಕಿರಿಯ ಮತ್ತು ಹಿರಿಯರಿಗಾಗಿ ಕೃಷ್ಣಮೂರ್ತಿಯವರ ಬೋಧನೆಯ ಅತ್ಯುತ್ತಮ ಪರಿಚಯವಿದಾಗಿದೆ.

ಕೃಷ್ಣಮೂರ್ತಿಯವರು ಭಾರತದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ನಡೆಸಿದ ಮಾತುಕತೆಗಳು ಮತ್ತು ಚರ್ಚೆಗಳನ್ನು ಒಳಗೊಂಡಿರುವ ಈ ಪುಸ್ತಕವು ವಿಶ್ವದ ಪ್ರಮುಖ ಭಾಷೆಗಳಿಗೆ ಅನುವಾದಗೊಂಡಿದೆ. ಇಲ್ಲಿ ಕೃಷ್ಣಮೂರ್ತಿಯವರು, ಶಿಕ್ಷಣದ ಕಾರ್ಯವು ಮಾನವ ಜೀವನದ ಉದ್ದೇಶಕ್ಕಿಂತ ಭಿನ್ನವಾಗಿಲ್ಲ ಎಂದು ನಿಸ್ಸಂದಿಗ್ಧವಾಗಿ ಹೇಳುತ್ತಾರೆ:

'ಉತ್ತಮಿಕೆ,ಸತ್ಯ ಅಥವಾ ದೇವರ ಹುಡುಕಾಟದಲ್ಲಿ ಚೈತನ್ಯವನ್ನು ಬಿಡುಗಡೆ ಗೊಳಿಸುವುದೇ ಶಿಕ್ಷಣದ ಕಾರ್ಯ. ಇದರಿಂದ ವ್ಯಕ್ತಿ ನಿಜವಾದ ಮಾನವನಾಗುವನಲ್ಲದೆ ಸಮರ್ಪಕ ನಾಗರಿಕನಾಗುವನು. ನದಿ ದಡಗಳನ್ನು ಸೃಷ್ಟಿಸಿದರೆ ಆ ದಡಗಳು ನದಿಯನ್ನು ಹಿಡಿದಿಟ್ಟುಕೊಳ್ಳುತ್ತವೆ; ಅಂತೆಯೇ ಸತ್ಯವನ್ನರಸುವ ಚೈತನ್ಯವು ಯಾವುದೇ ಬಗೆಯ ಹೇರಿಕೆ ಇಲ್ಲದ ಶಿಸ್ತನ್ನು ಸೃಷ್ಟಿಸುತ್ತದೆ. ನದಿ ಕಡಲ ಒಡಲು ಸೇರುವಂತೆ ಚೈತನ್ಯವು ತನ್ನದಾದ ಬಿಡುಗಡೆಯನ್ನು ಕಂಡುಕೊಳ್ಳುತ್ತದೆ.'

## ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

| | |
|---|---|
| **೧. ಜೆ.ಕೆ. ಜೀವನ – ದರ್ಶನ*** | ರೂ.೧೩೦/- |
| ಅನು. ಡಾ. ನಿ. ಮುರಾರಿ ಬಲ್ಲಾಳ | |
| **೨. ಧ್ಯಾನ ಚಿಂತನ** | ರೂ. ೫೦/- |
| ಅನು. ಡಾ. ನಿ. ಮುರಾರಿ ಬಲ್ಲಾಳ | |
| **೩. ಶಿಕ್ಷಣ ಮತ್ತು ಜೀವನ*** | ರೂ. ೬೫/- |
| ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ | |
| **೪. ಅನುದಿನ ಚಿಂತನ** | ರೂ.೪೦೦/- |
| ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ | |
| **೫. ಹಿಂಸೆಯನ್ನು ಮೀರಿ** | ರೂ.೧೫೦/- |
| ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ | |
| **೬. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ** | ರೂ.೨೦/- |
| ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ | |
| **೭. ಬಾಳಿಗೊಂದು ಭಾಷ್ಯ - ಸಂಪುಟ ೧** | ರೂ.೩೨೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೮. ಬಾಳಿಗೊಂದು ಭಾಷ್ಯ - ಸಂಪುಟ ೨*** | ರೂ.೧೫೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೯. ಬಾಳಿಗೊಂದು ಭಾಷ್ಯ - ಸಂಪುಟ ೩*** | ರೂ.೧೮೫/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೧೦. ಮೊದಲ ಹಾಗೂ ಕೊನೆಯ ಬಿಡುಗಡೆ** | ರೂ.೩೫೦/- |
| ಅನು. ರುಕ್ಮಿಣಿ ಕೃಷ್ಣಮೂರ್ತಿ | |
| **೧೧. ಭಯ ನಿಮಗೇನು ಮಾಡೀತು?** | ರೂ.೪೦/- |
| ಅನು. ಎಸ್. ದಿವಾಕರ್ | |
| **೧೨. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?** | ರೂ.೪೦/- |
| ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ | |
| **೧೩. ಸ್ವಾತಂತ್ರ್ಯ ಎಂದರೇನು?** | ರೂ.೪೦/- |
| ಅನು. ಗಿರೀಶ್ ವಾಘ್ | |
| **೧೪. ಶಿಕ್ಷಣ*** | ರೂ.೯೦/- |
| ಅನು. ಎಸ್.ಡಿ. ಕಾಶೀಕರ | |
| **೧೫. ಬದುಕಿನ ಕಡೆಗೆ** | ರೂ.೧೪೦/- |
| ಅನು. ಎಸ್.ಡಿ. ಕಾಶೀಕರ ಮತ್ತು<br>ವನಮಾಲಾ ಆರ್. ರಾವ್ | |
| **೧೬. ನೀವೇ ಲೋಕ, ನಿಮ್ಮೊಳಗೇ ಲೋಕ** | ರೂ. ೧೦೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೧೭. ಒಲವು ಒಂಟಿತನ** | ರೂ.೧೫೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೧೮. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ** | ರೂ.೧೫೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೧೯. ಒಳಜಗತ್ತು** | ರೂ.೧೮೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೦. ಸಾಮಾಜಿಕ ಜವಾಬ್ದಾರಿ** | ರೂ.೧೧೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೧. ಶಿಕ್ಷಕನಿಗೆ ಶಿಕ್ಷಣ** | ರೂ. ೫೦/- |
| ಅನು. ಡಾ. ಬಿ.ಬಿ. ರಾಜಪುರೋಹಿತ್ | |
| **೨೨. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ?** | ರೂ.೨೦೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೩. ಲೋಕ ಶಿಕ್ಷಕ** | ರೂ.೨೫೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೪. ಕೃಷ್ಣಮೂರ್ತಿ ಆತ್ಮಸಂಗಾತ** | ರೂ.೧೩೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೫. ಮುಗಿದ ಶಾಲೆ ತೆರೆದ ಜೀವನ** | ರೂ.೨೧೦/- |
| ಅನು. ಡಾ. ಮಹಾಬಲೇಶ್ವರ ರಾವ್ | |
| **೨೬. ಈ ಸಂಗತಿ ಕುರಿತು ಆಲೋಚನೆ ಮಾಡಿ** | ರೂ.೩೫೦/- |
| ಅನು. ಎಚ್ ಎಸ್ ರಾಘವೇಂದ್ರರಾವ್ | |

### *ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು ೨೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು ೪೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- * KFI ಪ್ರಕಟಿತ ಕನ್ನಡ ಪುಸ್ತಕಗಳು ೫೦% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ॥ ಎಚ್. ಎಸ್. ರಾಘವೇಂದ್ರರಾವ್
ಪ್ರೊ॥ ಓ. ಎಲ್. ನಾಗಭೂಷಣ ಸ್ವಾಮಿ
ಡಾ॥ ವನಮಾಲಾ ವಿಶ್ವನಾಥ್

**Published by:**
Editor: Arun N Haunshi
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org